355 (664) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೊಲೀಸ್ ಔಟ್‌ಪೋಸ್ಟ್‌ಗಳನ್ನು ತೆರೆಯುವಾಗ ಅನುಸರಿಸುವ ನೀತಿ ನಿಯಮಗಳೇನು,

ಆ) ಎಷ್ಟು ಜನಸಂಖ್ಯೆಗೆ ಒಂದರಂತೆ ಈ ಹೊರರಾಣೆಗಳನ್ನು ಸ್ಥಾಪಿಸಲಾಗುವುದು,

ಇ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಹೊಕ್ರಾಣಾ ಗ್ರಾಮದಲ್ಲಿರುವ ಪೊಲೀಸ್ ಹೊರರಾಣೆಯನ್ನು (ಔಟ್ ಪೋಸ್ಟ್) ಯಾವಾಗ ಪ್ರಾರಂಭಿಸಲಾಯಿತು,

ಈ) ಈ ಗ್ರಾಮವು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳ ಗಡಿಭಾಗದಲ್ಲಿ ಬರುತ್ತಿದ್ದು, ನಕ್ಸಲೀಯ ಪ್ರಭಾವಕ್ಕೆ ಒಳಾಗಿದ್ದು, ಆಗಾಗ ಈ ಗ್ರಾಮದಲ್ಲಿರುವ ಹೊರರಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ರಾಣೆಯನ್ನಾಗಿ ಮೇಲ್ದರ್ಜೆಗೆ ಏರಿಸುವ ಬಗ್ಗೆ ಪೊಲೀಸ್ ಮಹಾ ನಿರ್ದೇಶಕರಿಂದ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿರುವುದು ನಿಜವಲ್ಲವೇ,

ಉ) ಹಾಗಿದ್ದಲ್ಲಿ ಅತ್ಯಂತ ಹಿಂದುಳಿದ ಗಡಿ ಗ್ರಾಮವಾದ ಹೊಕ್ರಾಣಾದಲ್ಲಿ ಈಗಿರುವ ಪೊಲೀಸ್ ಔಟ್ ಪೋಸ್ಟ್‌ನ್ನು ಪೂರ್ಣ ಪ್ರಮಾಣದ ಪೊಲೀಸ್ ರಾಣೆಯನ್ನಾಗಿ ಮೇಲ್ದರ್ಜೆಗೆ ಏರಿಸಲು ಸರ್ಕಾರ ಕ್ರಮ ಕೈಗೊಳ್ಳುವುದಿಲ್ಲ,

ಊ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) .

ಅ) ಪೊಲೀಸ್ ಔಟ್ ಪೋಸ್ಟ್‌ಗಳನ್ನು ತೆರೆಯುವಾಗ ಅನುಸರಿಸುವ ಯಾವುದೇ ನೀತಿ ನಿಯಮಗಳು ಇರುವುದಿಲ್ಲ

ಆದರೆ ಮಾತೃರಾಣೆಯ ವ್ಯಾಪ್ತಿಯು ವಿಶಾಲತೆ ಹೊಂದಿದ್ದರೆ ಅಲ್ಲಿಯ ಸೂಕ್ತ ಕಾನೂನು ಸುವ್ಯವಸ್ಥೆ ಕಾಪಾಡಿಕೊಂಡು ಬರಲು ಅಪರಾಧಿಗಳ ನಿಯಂತ್ರಣ ಮಾಡಲು ಹಾಗೂ ಗ್ರಾಮಸ್ಥರ ಕುಂದುಕೊರತೆಗಳನ್ನು ಶೀಘ್ರವಾಗಿ ಪರಿಹರಿಸುವ ನಿಮಿತ್ಯ ಹೊರರಾಣೆಯ ಸೃಜನೆ ಪ್ರಸ್ತಾಪಿಸಬಹುದಾಗಿರುತ್ತದೆ

ಆ) ಜನಸಂಖ್ಯೆಯ ಮಾನದಂಡನೆಯ ಬಗ್ಗೆ ನಿರ್ಧಾರತೆ ಇರುವುದಿಲ್ಲ

ಇ) ದಿನಾಂಕ 25 8 1970ರಲ್ಲಿ ಈ ಪೊಲೀಸ್ ಹೊರರಾಣೆ ಪ್ರಾರಂಭಿಸಲಾಗಿದೆ

ಈ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಉ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಊ) ಉದ್ಭವಿಸುವುದಿಲ್ಲ

357 (676) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆ ಬಾದಾಮಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಉಪ ನಿರೀಕ್ಷಕರಾಗಲಿ ಅಥವಾ ಮುಖ್ಯ ಪೇದೆಗಳಾಗಲಿ ದೂರುಗಳನ್ನು ದಾಖಲಿಸದೇ ಕಿರುಕುಳ ನೀಡುವುದರ ಮೂಲಕ ದೂರು ನೀಡುವವರಿಂದ ಹಾಗೂ ಅಪರಾಧಿಗಳಿಬ್ಬರಿಂದಲೂ ಹಣ ಪಡೆದು ಅವ್ಯವಹಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಇಂತಹವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಯಾವುದೇ ನಿರ್ದಿಷ್ಟ ದೂರು ಈವರೆಗೂ ಬಂದಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

358 (838) ಶ್ರೀ ಹಾಲಪ್ಪ ಹೆಚ್ (ಹೊಸನಗರ) . ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಲಗೇರಿ–ಹಾನಕಲ್ ರಸ್ತೆಯು (ರಾ ಹೆ 26) ಹೊಸನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಸೊಡೂರಿನಿಂದ ಕಾರಣಗಿರಿಯ ವರೆಗಿನ 43 ಕಿಮೀಗಳ ಪೈಕಿ 23 ಕಿಮೀ ನಷ್ಟು ದೂರದ ರಸ್ತೆ ಏಕಪಥ (ಕಿರಿದಾದ) ರಸ್ತೆಯಾಗಿ ರುವುದರಿಂದ ದಟ್ಟಣೆಯ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,